Reg.No. M. 1550.
KODAGU" MERCARA, (Coorg)

15

ಕೊಡಗು

ಸಂಪಾದಕರು:—ಶ್ರೀ ಸಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩—೮—೦.

ಸಂಪುಟ ೨೪ | ತಾರೀಕು ೮—೯—೧೯೪೪ನೇ ಶುಕ್ರವಾರ. | ಸಂಚಿಕೆ ೧೪

ಐದು ವರ್ಷಗಳು.

1939ನೇ ಇಸವಿ ಸೆಪ್ಟೆಂಬರ್ 3ರಲ್ಲಿ ಮಿತ್ರರು ಜರ್ಮನರ ವಿರುದ್ಧ ಯುದ್ಧ ಸಾರಿದರು. ಈ ಸಮಯದಲ್ಲಿ ಪಂಡಿತ ಜವಾಹರರು ಚೀನಾದಲ್ಲಿದ್ದರು. ಅಖಿಲ ಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಆವರನ್ನು ಬರಮಾಡಿಕೊಂಡಿತು. ಸೆಪ್ಟೆಂಬರ್ 9ರಲ್ಲಿ ಸಭೆ ನೆರೆದು 'ಯುದ್ಧದ ಹಿಂದಿರುವ ಉದ್ದೇಶವನ್ನು ಬ್ರಿಟಿಷರು ಭಾರತೀಯರಿಗೆ ವಿಷದಪಡಿಸಬೇಕು. ಈ ಯುದ್ಧವು ತನ್ನುದೆಂದು ಎನಿಸುವದಾದರೆ, ಯುದ್ಧದ ನಂತರ ಹಿಂದೂದೇಶಕ್ಕೆ ಪೂರ್ಣ ಸ್ವಾತಂತ್ರ್ಯದ ಭರವಸೆ ಕೊಟ್ಟಿರೆ ಮಾತ್ರ ಅದಕ್ಕೆ ಪೂರ್ವ ಪೀಠಿಕೆಯಾಗಿ ಇಂದು ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿದರೆ ಭಾರತೀಯರು ಯುದ್ಧದಲ್ಲಿ ಮನಪೂರ್ವಕವಾಗಿ ಸಹಕರಿಸುವರು' ಎಂಬ ಠರಾವಾಯಿತು. ಈ ಗೊತ್ತುವಳಿಯು ಅಕ್ಟೋಬರ್ 12ರಲ್ಲಿ ಅ. ಭಾ. ಕಾ. ಸಮಿತಿಯಿಂದ ಅಂಗೀಕರಿಸಲ್ಪಟ್ಟಿತು. ಅದೇ ತಾರೀಕು 17ಕ್ಕೆ ವೈಸರಾಯನಾಗಿದ್ದ ಲಿನ್‌ಲಿತ್ಗೋರವರು ಒಂದು ಹೇಳಿಕೆ ಹೊರಡಿಸಿ ಕಾಂಗ್ರೆಸಿನ ಕೇಳಿಕೆಯಂತೆ ಅಭಿವಚನಕೊಡುವದು ಸಾಧ್ಯವಿಲ್ಲವೆಂದು ಸಾರಿದರು. ಇದನ್ನು ನೋಡಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಕಾಂಗ್ರೆಸ್ ಮಂತ್ರಿಮಂಡಳಗಳು ರಾಜಿನಾಮೆ ಕೊಡಬೇಕೆಂದು ತಾ. 22-10-39ರಲ್ಲಿ ಹೇಳಿತು. ನವೆಂಬರ್ ಮೊದಲನೇ ವಾರಕ್ಕೆ ಎಲ್ಲಾ ಕಾಂಗ್ರೆಸ್ ಮಂತ್ರಿಗಳೂ ರಾಜಿನಾಮೆಯಿತ್ತರು. ವೈಸರಾಯರು ಹಿಂದೂಸ್ಥಾನದ 52 ಮಂದಿ ಸುಂದಾಳುಗಳ ಭೇಟಿ ಮಾಡಿದರು. ಗಾಂಧೀಜಿ, ಜವಾಹರ್‌ಲಾಲ್ ಮೊದಲಾದವರನ್ನು ಕಂಡರು. ಯಾರೂ ಸಹಾಯಮಾಡಲೊಪ್ಪಲಿಲ್ಲ. ಬ್ಯಾ. ಜಿನ್ನಾರವರು ಅದೇ ಹಿತ ನುಡಿದರು.

1940-ಈ ವರ್ಷದ ಜೂನ್ ತಿಂಗಳಲ್ಲಿ ಜರ್ಮನಿಯು ಫ್ರಾನ್ಸನ್ನು ವಶಪಡಿಸಿಕೊಂಡ ನಂತರ ಕಾಂಗ್ರೆಸ್ ಕಾರ್ಯಕಾರಿ ಮಂಡಳವು ಸೇರಿ, ಹಿಂದೂದೇಶದ ರಕ್ಷಣಾ ವಿಭಾಗದ ಅಧಿಕಾರವನ್ನು ಒಳಗೊಂಡ ರಾಷ್ಟ್ರೀಯ ಸರಕಾರ ರಚಿಸಲು ಬ್ರಿಟಿಷರು ಒಪ್ಪಿದಪಕ್ಷದಲ್ಲಿ ಸಹಾಯ ಮಾಡುವ ಅರ್ಥದ ಠರಾವನ್ನು ಮಾಡಿತು. ಜುಲೈ 28ಕ್ಕೆ ಪೂನಾದಲ್ಲಿ ನಡೆದ ಅಖಿಲಭಾರತ ಕಾಂಗ್ರೆಸ್ ಕಮಿಟಿಯು ಇದನ್ನು ಮೊನ್ಯಮಾಡಿತು. ಈ ಠರಾವು ಕಾಂಗ್ರೆಸಿನ ಅಹಿಂಸಾತತ್ವಕ್ಕೆ ಆಪತ್ತು ಬಂದುದರಿಂದ ಮಹಾತ್ಮರು ಇದನ್ನು ವಿರೋಧಿಸಿ ಕಾಂಗ್ರೆಸಿನಿಂದ ದೂರನಿಂತರು. ಸರ್ಕಾರವು ಈ ಠರಾವಿಗೂ ಲಕ್ಷ್ಯಕೊಡಲಿಲ್ಲ. ಆದ್ದರಿಂದ ಸೆಪ್ಟೆಂಬರಿನಲ್ಲಿ ಕಾಂಗ್ರೆಸು ಪುನಹ ಗಾಂಧೀಜಿಯವರ ಮುಂದಾಳ್ತನವನ್ನು ಸ್ವೀಕರಿಸಿ ಅವರಿಗೆ ರಾಜಕೀಯ ಹೋರಾಟದಲ್ಲಿ ಪೂರ್ಣಾಧಿಕಾರವನ್ನು ಕೊಟ್ಟಿತು. ನಂತರ ವೈಯಕ್ತಿಕ ಸತ್ಯಾಗ್ರಹ ಪ್ರಾರಂಭವಾಯಿತು. ಶ್ರೀ ವಿನೋಬಾಭಾವೆಯವರು ಪ್ರಥಮ ಸತ್ಯಾಗ್ರಹಿಯಾಗಿ ಜೈಲಿಗೆ ಹೋದರು. ಈ ಸತ್ಯಾಗ್ರಹದಲ್ಲಿ ಸುಮಾರು 27,000 ಜನರು ಜೈಲು ಸೇರಿದರು.

1941-ವೈಯಕ್ತಿಕ ಸತ್ಯಾಗ್ರಹವು ಈ ವರ್ಷದ ನವಂಬರ್ ತಿರಿಗೆ ನಡೆಯಿತು. ಈ ಸಮಯಕ್ಕೆ ಬ್ರಿಟಿಷರಿಗೆ ಅಮೇರಿಕದ ಸಹಾಯವೂ ಒರೆಯುವಂತಾಯಿತು. ರಷ್ಯಾ ಜರ್ಮನಿ ಕಾಳಗ ಪ್ರಾರಂಭವಾಗಿ ಬ್ರಿಟಿಷರಿಗೆ ಯುದ್ಧದ ಭಾರ ಹಗುರವಾಯಿತು. ಸರಕಾರವು ಎಲ್ಲ ಕಾಂಗ್ರೆಸ್ ಕೈದಿಗಳನ್ನು ಡಿಸೆಂಬರ್ 5ರಲ್ಲಿ ಬಿಡುಗಡೆ ಮಾಡಿದರು. ಡಿಸೆಂಬರು 7ರಲ್ಲಿ ಜಪಾನು ಯುದ್ಧದಲ್ಲಿ ಸೇರಿತು. ಇದರ ಪರಿಣಾಮವು ಹಿಂದೂಸ್ಥಾನದ ಮೇಲೆ ಬಹುವಾಗಿ ಆಯಿತು. 'ಬ್ರಿಟಿಷ್ ಸರಕಾರಕ್ಕೆ ಸಹಾಯಮಾಡುವದು ಅಶಕ್ಯವೆಂದು ಹಲವಾರು ರಾಜಕೀಯ ಮುಂದಾಳುಗಳೇ ಜೀವಕತೊಡಗಿದರು.

1942-ಈ ವರ್ಷದ ಜನವರಿಯಲ್ಲಿ 'ಯುದ್ಧಾನಂತರ ಪೂರ್ಣ ಸ್ವರಾಜ್ಯವೊಡುವೆವು, ತತ್ಕಾಲಕ್ಕೆ ರಾಷ್ಟ್ರೀಯ ಸರಕಾರ ಸ್ಥಾಪಿಸಿರಿ' ಎಂಬ ಭರವಸೆ ಕೊಡಬೇಕೆಂಬ ಕಾಂಗ್ರೆಸ್ ಠರಾವು ಪುನಹ ಮುಂದು ಮಾಡಲ್ಪಟ್ಟಿತು. ಈ ಸಮಯದಲ್ಲಿ ಜಪಾನರು ರಭಸದಿಂದ ಹಿಂದೂದೇಶದ ಕಡೆಗೆ ನುಗ್ಗತೊಡಗಿದರು. ಈ ಸಂದರ್ಭದಲ್ಲಿ ಹಿಂದೂದೇಶವೊಡನೆ ಒಪ್ಪಂದ ಮಾಡಲು ಬ್ರಿಟಿಷರು ಸರ್ ಸ್ಟಾಫರ್ಡ್‌ಕ್ರಿಪ್ಸರನ್ನು ಕಳುಹಿಸಿದರು. ಕ್ರಿಪ್ಸರು ಹಿಂದೂದೇಶದ ಎಲ್ಲಾ ಮುಂದಾಳುಗಳನ್ನು ಕಂಡನ್ನು. ಸ್ಟಾಫರ್ಡರ ಕೊಡುಗೆಯು ಹಿಂದೂದೇಶದ ಯಾರನ್ನೂ ತೃಪ್ತಿಪಡಿಸಲಿಲ್ಲ. ಆದ್ದರಿಂದ ಅವರು ಶೀಘ್ರ ಹಿಂತಿರುಗಬೇಕಾಯಿತು. ಈ ಸಂದರ್ಭದಲ್ಲಿ 'ಪಾಕಿಸ್ಥಾನವನ್ನು ಒಪ್ಪಿ ಹಿಂದೂ ಮುಸ್ಲಿಮರ ಐಕ್ಯತೆಯನ್ನು ಸಾಧಿಸಿ ಒಂದಾಗಬೇಕು' ಎಂಬ ವಿಚಾರವನ್ನು ರಾಜಗೋಪಾಲಾಚಾರಿಯವರು ಆರಂಭಿಸಿದರು. ಕಾಂಗ್ರೆಸು ಇದನ್ನು ಮಾನಿಸದ್ದರಿಂದ ರಾಜಾಜಿಯವರು ವರ್ಕಿಂಗ್ ಕಮಿಟಿ ಸದಸ್ಯತನಕ್ಕೆ ರಾಜಿನಾಮೆಯಿತ್ತರು. ಜಪಾನರು ಏಪ್ರಿಲ್‌ನಲ್ಲಿ ಬರ್ಮಾವನ್ನು ವಶಪಡಿಸಿಕೊಂಡರು. ಇದರಿಂದ ದಿಗಿಲುಗೊಂಡ ಬ್ರಿಟಿಷರು ಬರ್ಮಾದ ಹತ್ತಿರದ ಬಂಗಾಳ, ಒರಿಸಾ, ಬೀಹಾರ್ ಮೊದಲಾದ ಪ್ರಾಂತಗಳ ಜನರಿಂದ ದೋಣಿ, ಮೋಟಾರು, ಬೈಸಿಕಲ್ಲು ಮೊದಲಾದ ವಾಹನಗಳನ್ನು ಕಸಿದುಕೊಂಡು ವೈರಿಗಳಿಗೆ ಮಣ್ಣಡೆಯಲು ಆತಂಕಮಾಡುವ ಕಾರ್ಯಕ್ಕೆ ಕೈಕೊಂಡರು. ಗಾಂಧಿಯವರು ಸರಕಾರದ ಈ ನೀತಿಯನ್ನು ನಿಶೇಧಿಸಬೇಕೆಂದೂ, ಜಪಾನರಿಗೆ ಸಹಾಯಮಾಡಬಾರದೆಂದೂ ಆ ಭಾಗದ ಜನರಿಗೆ ಸಂದೇಶ ಕಳುಹಿಸಿದರು. ನಂತರ ಆಗೆಸ್ಟ್ 8ರಲ್ಲಿ ಬೊಂಬಾಯಿಯಲ್ಲಿ ಸೇರಿದ ಕಾಂಗ್ರೆಸ್ ಸಭೆಯು 'ಕ್ವಿಟ್ ಇಂಡಿಯಾ' ಠರಾವನ್ನು ಅಂಗೀಕರಿಸಿತು. ಸರಕಾರವು ಕಾಂಗ್ರೆಸಿನ ಮೇಲೆ ಗದೆಯೆತ್ತಿತು. ಕಾಂಗ್ರೆಸು ಮುಂದಾಳುಗಳನ್ನು ದಸ್ತಗಿರಿ ಮಾಡಿತು. ಇದರಿಂದ ರೊಚ್ಚಿಗೆದ್ದ ಜನರು ನಾನಾಶವಿನಾಶಕ ಕಾರ್ಯಕ್ರಮಗಳನ್ನು ಕೈಕೊಂಡರು. ಈ ಅಂದೋಲನದಲ್ಲಿ 2 ಲಕ್ಷಕ್ಕೆ ಮಿರಿ ಜನರು ಸೆರೆಮನೆ ಸೇರಿದರು.

1943-'ನನ್ನ ಮೇಲೆ ಹೊರಿಸಿರುವ ಅಪರಾಧಗಳ ವಿಚಾರಣೆ ಮಾಡಬೇಕು. ಇಲ್ಲವೇ ಸ್ವತಂತ್ರ ಮನುಷ್ಯನಂತೆ ಇರಲು ನನಗೆ ಅಪ್ಪಣೆ ಕೊಡಬೇಕು' ಎಂಬ ಬೇಡಿಕೆಯನ್ನು ಗಾಂಧೀಜಿಯವರು ಸರಕಾರದ ಮುಂದಿಟ್ಟರು. ಬಂಗಾಳದ ಬರಗಾಲ, ದೇಶದಲ್ಲಿಯ ಕ್ಷೋಭೆ ಇವರಿಂದ ಗಾಂಧೀಜಿಯವರ ಮನಸು ಕದಡಿಹೋಗಿತ್ತು. ಅವರು ಫೆಬ್ರವರಿ 10ನೇ ತಾರೀಕಿನಿಂದ 21 ದಿನಗಳ ಉಪವಾಸ ಪ್ರಾರಂಭಿಸಿದರು. ಇದರ ಪರಿಣಾಮವಾಗಿ ವೈಸರಾಯರ ಎಗ್ಸಿಕ್ಯೂಟಿವ್ ಕೌನ್ಸಿಲ್ ಸದಸ್ಯರಾದ ಮೋಡಿ, ಸರ್ಕಾರ್, ಅಣೆಯವರು ಸರಕಾರದ ಬಗ್ಗೆ ನಿಷೇಧ ವ್ಯಕ್ತಮಾಡಿ ರಾಜಿನಾಮೆಯಿತ್ತರು. ಉಪವಾಸದಿಂದ ಅಶಕ್ತರಾದ ಗಾಂಧೀಜಿಯವರನ್ನು ಬಿಡುಗಡೆ ಮಾಡಬೇಕೆಂದು ಇಡೀ ಹಿಂದೂದೇಶ ಕೂಗಿತು. ಆ ಕಾಲಕ್ಕೆ ನುಮಂನಡೆಯುತ್ತಿದ್ದ ಜರ್ಮನ್ ಸೇನೆಯು ಸ್ಟಾಲಿನ್‌ಗ್ರೇಡಿನಿಂದ ಹಿನ್ನಡೆಯಬೇಕಾಗಿ ಬಂದು ಮಿತ್ರರ ಪರಿಸ್ಥಿತಿ ಸುಧಾರಿಸುವ ಚಿಹ್ನೆಗಳು ಕಂಡು ಬರುತ್ತಿದ್ದುವು. ಮಿತ್ರರು ಹಿಂದೂದೇಶದ ಕೇಳಿಕೆಗಳಿಗೆ ಬೆಲೆ ಕೊಡದೆ ವರ್ತಿಸಿದರು. ಈ ಸಮಯಕ್ಕೆ ಲಿನ್‌ಲಿತ್ಗೋರವರ ಬದಲು ವೇವೆಲ್ಲರು ವೈಸರಾಯರಾಗಿ ಬಂದರು. ಹಿಂದೂಸ್ಥಾನದ ವೈಸರಾಯ್ ಪದವಿಯನ್ನು ಸ್ವೀಕರಿಸಲು ಯಾರೂ ಮುಂದೆ ಬಾರದ ಕಾರಣ ಈ ಯೋಧನನ್ನು ಕಳುಹಿಸಬೇಕಾಯಿತು. ಹಿಂದೂದೇಶದ ಆಹಾರವು ಹೊರಗೆ ಹೋಗತೊಡಗಿ ಜನರು ಕೂಳಿಲ್ಲದೆ ನರಿ ನಾಯಿಗಳಂತೆ ರಸ್ತೆ ರಸ್ತೆಗಳಲ್ಲಿ ಸತ್ತರು. ಲೆಕ್ಕವಿಲ್ಲದ ರೀತಿ ನೋಟುಗಳನ್ನು ಛಾಪಿಸಿ ದೇಶದಲ್ಲಿ ತುಂಬಿ ಹಿಂದೂದೇಶದ ಪದಾರ್ಥಗಳನ್ನು ಪಡೆಯಲಾಯಿತು. ಹಿಂದೂಸ್ಥಾನವು ಬ್ರಿಟಿಷರಿಗೆ 60 ಕೋಟಿ ಸಾಲ ಕೊಡಲಿಕ್ಕಿದೆಯೆಂದು ಯುದ್ಧಕ್ಕೆ ಮೊದಲು ಸಾರಿದ್ದರು. ಯುದ್ಧದಲ್ಲಿ ಹಿಂದೂಸ್ಥಾನದಿಂದ ಯುದ್ಧ ಸಾಧನೆಗಳ ಮೂಲಕ ಈ ಸಾಲವು ತೀರಿ ಹಿಂದೂದೇಶಕ್ಕೆ ಬ್ರಿಟನು ಈಗ 1000 ಕೋಟಿ ರೂ. ಕೊಡಬೇಕಿದೆ. ಈ ಹಣವನ್ನು ಹಾರಿಸಿಕೊಳ್ಳುವ ಬಗ್ಗೆ ಚಿಹ್ನೆಗಳು ಈಗಲೇ ಕಂಡು ಬರುತ್ತಿವೆ. ಹಿಂದೂಸ್ಥಾನದ ಆರ್ಥಿಕ ತಜ್ಞರು ಈ ಬಗ್ಗೆ ಕೂಗಿಕೊಂಡರೂ ಹಿಡಿತ ಬ್ರಿಟಿಷರಲ್ಲಿರುವಾಗ ಈ ಹಣ ಭಾರತೀಯರಿಗೆ ದೊರೆಯುವದೆಂಬ ಭರವಸೆಯಾದರೂ ಎಲ್ಲಿದೆ?

1944-ದೇಶದಲ್ಲಿ ಉಪಸ್ಥಿತವಾಗಿರುವ ಅನ್ನಾನ್ನ ನಿರ್ಗತಿಯ ಪರಿಸ್ಥಿತಿಯನ್ನು ಸುಧಾರಿಸಲು ಕಾಂಗ್ರೆಸಿಗರನ್ನು 'ಬಿಡಬೇಕೆಂದು ಕೂಗೆದ್ದಿತು. ಕೇಂದ್ರ ಎಸೆಂಬ್ಲಿಯಲ್ಲೂ ಠರಾವುಗಳಾದವು. ಆದರೂ ಫಲಕಾರಿಯಾಗಲಿಲ್ಲ. ಮಹಾತ್ಮ ಗಾಂಧಿಜೀಯವರಿಗೆ ಈ ಮಧ್ಯೆ ಖಾಯಿಲೆಯಾಗಿ ಮೇ ತಾ. 6ರಲ್ಲಿ ಅವರು ಬಿಡುಗಡೆ ಮಾಡಲ್ಪಟ್ಟರು. ಅವರ ಪ್ರಕೃತಿಯು ಸುಧಾರಿಸಿದೊಡನೆ ಬ್ರಿಟಿಷ್ ಪ್ರತಿನಿಧಿಯೊಡನೆ ಒಪ್ಪಂದದ ಪ್ರಯತ್ನ ಮಾಡಿದರು. ಆದರೆ ಇದರಿಂದ ನಿರಾಶರಾಗಿ, 'ಬ್ರಿಟಿಷ್ ಸರಕಾರವು ಹಿಂದೂದೇಶಕ್ಕೆ ಅಧಿಕಾರ ಬಿಟ್ಟುಕೊಡಲು ಸಿದ್ಧವಿಲ್ಲ, ನಾವು 'ಅಧಿಕಾರವನ್ನು ಕಸಿದುಕೊಳ್ಳಬೇಕು' ಎಂದು ಹೇಳಿದರು. ರಾಜಗೋಪಾಲಾಚಾರಿಯವರು ದೇಶದಲ್ಲಿ ಐಕ್ಯತೆ ಸ್ಥಾಪಿಸ

(3ನೇ ಪುಟ ನೋಡಿ)

ಕೊ ಡ ಗು

ತಾ. ೮-೯-೧೯೪೪ನೇ ಶುಕ್ರವಾರ

ಭತ್ತದ ಬೆಲೆ.

ಆಹಾರ ಪದಾರ್ಥಗಳ ಬೆಲೆಯನ್ನು ನಿಯಂತ್ರಿಸಿದ್ದು ಬಡವನ ಹಿತದ ದೃಷ್ಟಿಯಿಂದ ಎಂಬುದನ್ನು ಎಲ್ಲರೂ ಒಪ್ಪಬೇಕಾಗಿದೆ. ಆದರೆ ಬೆಳೆಸುವವನ ಹಿತವನ್ನು ಕೂಡ ಸಾಕಷ್ಟು ರಕ್ಷಣೆ ಮಾಡದಿದ್ದರೆ ಬೆಳೆಯೇ ಕಡಿಮೆಯಾಗಿ ಕೊಂಡುಕೊಳ್ಳುವ ಬಡವನ ಪಾಡು ಮತ್ತಷ್ಟು ಕಠಿಣವಾಗುವದು. ಅದರಲ್ಲೂ ಕೊಡಗಿನ ವ್ಯವಸಾಯಗಾರರ ಸ್ಥಿತಿಯು ಹೊರಗಿನ ಪ್ರಾಂತಗಳಿಗಿಂತಾ ಸಂಪೂರ್ಣ ಬೇರೆಯಾಗಿದೆ. ಕೊಡಗು ವ್ಯವಸಾಯಕ್ಕೆ ಅತ್ಯಗತ್ಯವಾಗಿರುವ ದನಕರುಗಳಿಗೆ ಮೈಸೂರು ಪ್ರಾಂತವನ್ನು ಅವಲಂಬಿಸಿಕೊಂಡಿದೆ. ಮಿಲಿಟರಿಯವರ ಅವಶ್ಯಕತೆಯಿಂದಲೋ ಏನೋ ಈಗ ಎತ್ತುಗಳು ಮೈಸೂರಿನಿಂದ ಕೊಡಗಿಗೆ ಬರುವದೇ ಅಪರೂಪವಾಗಿದೆ. ಈ ವರ್ಷ ಭೀಕರವಾದ ಅಂಟುರೋಗದ ದೆಸೆಯಿಂದ ಪೂರಾಟಕ್ಕೆ ಬಂದ ಕೋಣಗಳ ಸಂಖ್ಯೆಯೂ ಕೂಡ ಬಹಳ ಕಡಿಮೆಯಾಗಿ ಬೆಲೆಯು ವಿಪರೀತ ಏರಿತ್ತು. ಇಂಥಾ ಹೆಚ್ಚಿನ ಬೆಲೆಕೊಟ್ಟು ಕೊಂಡು ಕೊಂಡ ಕೋಣಗಳೂ ಕೂಡ ಕೊಡಗಿನಲ್ಲಿಯೂ ಬಹು ಮಟ್ಟಿಗೆ ಅಂಟುರೋಗಕ್ಕೆ ತುತ್ತಾಗಿವೆ. ಕೊಡಗಿನ ಭೂಮಾಲಿಕರು ಕೆಲಸಗಾರರಿಗಾಗಿ ಮಲಬಾರು, ದಕ್ಷಿಣ ಕನ್ನಡ ಮತ್ತು ಮೈಸೂರುಗಳನ್ನು ನಂಬಿಕೊಂಡಿರುವದಾಗಿದೆ. ಕೆಲಸಗಾರರ ದಿನ ಕೂಲಿಯು ಈಗ ಒಂದು ರೂಪಾಯಿಗಿಂತಲೂ ಹೆಚ್ಚಾಗಿದೆ. ಅಷ್ಟು ಹೆಚ್ಚಾದರೂ ಸಾಕಷ್ಟು ಕೆಲಸಗಾರರು ದೊರೆತಿರುವದಿಲ್ಲ. ಇವೆರಡು ವಿಶೇಷ ಕಾರಣಗಳಲ್ಲದೆ, ರೈತನ ಜೀವನದ ಖರ್ಚು ಇತರ ಪ್ರಾಂತಗಳಲ್ಲಿರುವಂತೆ ಬಹು ಮಟ್ಟಿಗೆ ಏರಿದೆ. ಈ ಮೇಲಿನ ಕಾರಣಗಳಿಂದಾಗಿಯೂ, ಮಳೆಯಭಾವದಿಂದಲೂ ಶೇಕಡ 20 ಕ್ಕಿಂಥಾ ಹೆಚ್ಚಾಗಿಯೇ ಬೆಳೆಯು ಕಡಿಮೆಯಾಗುವದೆಂಬ ಅಂದಾಜು ತೋರುತ್ತಿದೆ. ಈ ಸ್ಥಿತಿಯಲ್ಲಿ ಸರಕಾರದವರು ಕಳೆದ ವರ್ಷ ನಿಶ್ಚಯಿಸಿದ ಭತ್ತದ ಬೆಲೆಯು ರೈತನ ಕಷ್ಟಗಳನ್ನು ಎಂದೂ ಪರಿಹಾರಮಾಡಲಾರದು. ಆದನ್ನು ಗಾಡಿಗೆ ರೂ. 150 ಕ್ಕಾದರೂ ಏರಿಸುವದು ಜಿತ್ಯಗತ್ಯವಾಗಿದೆ. ಅದರೆ ಕೊಡಗಿನಲ್ಲಿ ಕೊಂಡುಕೊಂಡು ಉಣ್ಣುವ ಕೆಲಸಗಾರರಿಗೆ ಇದರಿಂದ ತೊಂದರೆಯಾಗದಂತೆ, ಕೊಡಗಿನ ಸರಕಾರದವರು ಕೊಡಗಿನೊಳಗೆ ಮೂರಾಟವಾಗುವ ಅಕ್ಕಿಯ ಅಂದಾಜು ಮೂಡಿ, ಅಷ್ಟು ಭತ್ತವನ್ನು ಹೆಚ್ಚಿನ ಬೆಲೆಯಲ್ಲಿ ಕೊಂಡು ಕೊಂಡು ಮೈಸೂರು ಸರಕಾರದವರು ಈಗ ಮಾಡುತ್ತಿರುವಂತೆ ಕಡಿಮೆ ಬೆಲೆಯಲ್ಲಿ ಅಕ್ಕಿಯನ್ನು ಮೂರಾಟಮಾಡಬೇಕಾಗಿದೆ. ಇದರಿಂದಾಗುವ ಅಲ್ಪ ನಷ್ಟವನ್ನು ಸರಕಾರದವರು ನಿರ್ವಹಿಸಿಕೊಳ್ಳಬೇಕು. ಈ ಅಲ್ಪ ನಷ್ಟವನ್ನು ಸರಕಾರದವರು ವಹಿಸಿಕೊಳ್ಳಪೆ ಹೋದರೆ ಬೆಳೆ ಬೆಳೆಸುವದೇ ಕಡಿಮೆಯಾಗಿ ದೇಶದ ಉತ್ಪತ್ತಿಯೇ ಬಹು ಮಟ್ಟಿಗೆ ಕಡಿಮೆಯಾಗುವದು. ಕೊಡಗಿನಿಂದ ಹೊರಗೆಹೋಗುವ ಭತ್ತದ ಬೆಲೆಯನ್ನು ನಿಯಂತ್ರಣಮಾಡಿದ್ದರೂ ಕೂಡ ಹೊರಗಿನಿಂದ ಕೊಡಗಿಗೆ ಬರುವ ದನಕರುಗಳ ಕ್ರಯವನ್ನೂ, ಕೆಲಸಗಾರರ ಮಜೂರಿಯನ್ನೂ ನಿಯಂತ್ರಣ ಈವರೆಗೂ ಮಾಡಿರುವದಿಲ್ಲ. ಹೊರಗಿನಿಂದ ಕೊಡಗಿಗೆ ಬರುವ ಇತರ ಆಹಾರ ಪದಾರ್ಥಗಳು ನಿಯಂತ್ರಣ ಬೆಲೆಗಂತು ದೊರೆಯುವದಂತಿರಲಿ, ಸಾಕಷ್ಟು ಪರಿಮಾಣದಲ್ಲಿ ಕೂಡ ಸಿಕ್ಕುತ್ತಿಲ್ಲ. ಅಂದ ಮೇಲೆ ಎಲ್ಲಾ ರೀತಿಯಲ್ಲಿಯೂ ಕೊಡಗಿನ ರೈತನ ಪಾಡು ಶೋಚನೀಯವಾಗಿದೆ.

ಈಗಾಗಲೇ ಕೊಡಗು ಸಹಕಾರಿ ಮಾರ್ಕೆಟಿಂಗ್ ಫೆಡರೇಶನಿನವರು ಭತ್ತದ ಕ್ರಯ ಗಾಡಿ ಒಂದಕ್ಕೆ ರೂ. 150 ಕ್ಕೆ ಏರಿಸಬೇಕೆಂದು ಚೀಫ್ ಕಮಿಷನರಿಗೆ ಡೆಪ್ಯುಟೇಶನ್ ಹೋಗಿರುವರು. ಕೊಡಗು ಜಿಲ್ಲಾ ಬೋರ್ಡಿನವರೂ ಇದೇ ರೀತಿಯ ತೆರಾವನ್ನು ಪಾಸುಮಾಡಿರುವರು. ದೇಶದ ಕೆಲವು ಕಡೆಗಳಲ್ಲಿ ಸಾರ್ವಜನಿಕ ಸಭೆಗಳು ನಡೆದು ಇದೇ ಕೇಳಿಕೆಯನ್ನು ಸರಕಾರದ ಮುಂದಿಡುತ್ತಿದ್ದಾರೆ. ದೇಶದವರೆಲ್ಲರೂ ಒಗ್ಗಟ್ಟಾಗಿ ಈ ವಿಚಾರದಲ್ಲಿ ಸ್ಥಳೀಯ ಸರಕಾರವನ್ನೂ, ಅವಶ್ಯವಿದ್ದರೆ ಇಂಡಿಯಾ ಸರಕಾರವನ್ನೂ ಒತ್ತಾಯಪಡಿಸಬೇಕಾಗಿದೆ. ಸ್ಥಳೀಯ ಸರಕಾರದವರು ಈ ಮೇಲಿನ ಕಾರಣಗಳನ್ನೆಲ್ಲಾ ಮಂದಟ್ಟಾಗುವ ರೀತಿ ಇಂಡಿಯಾ ಸರಕಾರದ ಮುಂದಿಟ್ಟು ಜನರ ಕೋರಿಕೆಯಂತೆ ಬತ್ತದ ಬೆಲೆಯನ್ನು ಏರಿಸಬೇಕಾದ್ದು ಜನರ ಮತ್ತು ಸರಕಾರದ ಹಿತ ದೃಷ್ಟಿಯಿಂದ ಅವಶ್ಯವಾಗಿದೆ. ಇಲ್ಲವಾದರೆ ದೇಶದ ಮುಂದಿನ ಸ್ಥಿತಿಯು ಬಹು ಭಯಾನಕವಾಗುವದರಲ್ಲಿ ಸಂಶಯವಿಲ್ಲ.

ಒಳದೇಶ.

ಕೊಡವ ವಿದ್ಯಾಭಿವೃದ್ಧಿ ನಿಧಿಗೆ ರೂ. 500 ಕೊಟ್ಟು ಶ್ರೀ ನಡಿಕೇರಿಯಂಡ ಸೋಮಯ್ಯನವರು ಜೀವಾವಧಿ ಸದಸ್ಯರಾಗಿರುವರು.

ಮಡಿಕೇರಿಯಲ್ಲಿ ಹೊಸದಾಗಿ ಇಬ್ಬರಿಗೆ ಪ್ಲೇಗುತಗಲಿದೆಯೆಂದೂ, ಇಲಿಗಳು ಸಾಯುವದು ಜೋರಾಗಿದೆಯೆಂದೂ ತಿಳಿಯಬಂದಿದೆ.

ಶಿರಂಗಾಲದಲ್ಲಿ ಪ್ಲೇಗು ಪ್ರಾರಂಭವಾಗಿದೆಯೆಂದು ವರ್ತಮಾನವಿದೆ.

ಶ್ರೀ. ತೇಲಪಂಡ ಕಾರ್ಯಪ್ಪನವರನ್ನು ವೀರಾಜಪೇಟೆ ಹೈಸ್ಕೂಲಿಗೂ, ಶ್ರೀ. ಎನ್. ಸಿ. ಸುಬ್ಬಯ್ಯನವರನ್ನು ಮಡಿಕೇರಿ ಉಪಧ್ಯಾಯರ ತರಬೇತು ಶಾಲೆಗೂ, ಶ್ರೀ. ಡಿ. ಎನ್. ಕೃಷ್ಣಯ್ಯನವರನ್ನು, ಆ. ವಿದ್ಯಾಧಿಕಾರಿಗಳಾಗಿಯೂ ವರ್ಗಾಯಿಸಲಾಗಿದೆ.

ಶ್ರೀ. ಜಿ. ಡಿ. ಪರಮೇಶ್ವರರವರ ಬದಲು ಶ್ರೀ. ಕೊರವಂಡ ಸುಬ್ಬಯ್ಯನವರನ್ನು ಸಿವಿಲ್ ಸರ್ಜನರ ಆಫೀಸಿನ ಮುಖ್ಯ ಗುಮಾಸ್ತರಾಗಿ ನೇಮಿಸಲಾಗಿದೆ.

ಟ್ರಾವಂಕೂರ್ ಸಂಸ್ಥಾನದ ವಹಿವಾಟುಯೋಜನೆ ಮತ್ತು ಅದಕ್ಕೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ಆಭ್ಯಸಿಸಿ 20 ದಿನಗಳೊಳಗೆ ಬರಲು ವೀರಾಜಪೇಟೆ ಪೊಲೀಸು ಸರ್ಕಲ್ ಇನ್ಸ್‌ಪೆಕ್ಟರಾದ ಶ್ರೀ ಮಲ್ಲೇಂಗಡ ಮುತ್ತಣ್ಣರವರನ್ನು ಆರಿಸಿ ಅವರು ತಾ. 15-9-44 ರಲ್ಲಿ ಟ್ರಾವಂಕೂರಿಗೆ ಹೋಗಲಿರುವರು.

ಕೊಡಗಿನಲ್ಲಿ ಜುಲೈ ತಿಂಗಳಲ್ಲಿ 321 ಜನನಗಳೂ 373 ಮರಣಗಳೂ ಸಂಭವಿಸಿವೆಯೆಂದು ಪ್ರಕಟವಾಗಿದೆ.

ಸೋಮವಾರಪೇಟೆ ನೋಟಫೈಡ್ ಏರ್ಯಾದ ಸದಸ್ಯರಾಗಿ ಶ್ರೀಗಳಾದ ಜಿ. ಎಸ್. ಬಸಪ್ಪ, ಎಚ್. ಎಂ. ಬಸಪ್ಪ, ಜಿ. ಬಸವಲಿಂಗಯ್ಯ, ಬಿ. ಟಿ. ಚಿನ್ನಯ್ಯ, ಡಿ. ಎಚ್. ದಾಸಪ್ಪ, ಕೆ. ಮೊಗಪ್ಪ ಮತ್ತು ಎಚ್. ಸಿ. ರಾಜಾರಾಯರನ್ನು ಆರಿಸಲಾಗಿದೆ.

ಫ್ರೇಜರ್‌ಪೇಟೆಯ ನೋಟಫೈಡ್ ಏರ್ಯಾದ ಸದಸ್ಯರಾಗಿ ಶ್ರೀಗಳಾದ ಅಬ್ದುಲ್ ಅಜೀಸ್, ಶ್ರೀ. ಚಿನ್ನವೀರೇಗೌಡ, ಎಸ್. ಎನ್. ಲಕ್ಷ್ಮಣಶೆಟ್ಟಿ, ಮಾದುರಶೆಟ್ಟಿ, ಮಹಮ್ಮದಯಾಸಿನ್ ಮತ್ತು ಸರಪ್ ಸುಬ್ಬಶೆಟ್ಟರನ್ನು ಆರಿಸಲಾಗಿದೆ.

ಕೊಡ್ಲಿಪೇಟೆಯ ನೋಟಫೈಡ್ ಏರ್ಯಾದ ಸದಸ್ಯರಾಗಿ ಶ್ರೀಗಳಾದ ಕೆ. ಎ. ಗನ್ನಿಸಾಹೇಬ್, ಕೆ. ಎಸ್. ಗುರುಲಿಂಗಪ್ಪ, ಕೆ. ಎಂ. ಎಸ್. ಗೌಸ್ ಸಾಹೇಬ್, ಎಂ. ಎಂ. ಕರಿಬಸಪ್ಪ, ಮೂವಿನಳ್ಳಿ ಸಿದ್ದಬಸಪ್ಪ, ಕೆ. ಎಸ್. ವೆಂಕಟ್ರಮಣ ಶೆಟ್ಟಿ ಇವರುಗಳನ್ನು ಆರಿಸಲಾಗಿದೆ.

ತಾ. 5-9-44ರಲ್ಲಿ ವೆಟರಿನರಿ ಸಂಘದ ವಿಶೇಷ ಸಭೆಯು ಅಮ್ಮತ್ತಿಯಲ್ಲಿ ನಡೆಯಿತು. ಚೀಫ್ ಕಮಿಶನರು ಹಾಜರಿದ್ದರು.

ಬೆಣ್ಣಾವರ, ಶನಿವಾರಸಂತೆ, ಗೋಣಿಮರೂರು, ನಿಡ್ತ ಮೊದಲಾದೆಡೆ ಸುತ್ತಿ ತೊಂದರೆ ಕೊಡುತ್ತಿದ್ದ ಪುಂಡಾನೆಯನ್ನು ಚೀಫ್ ಕಮಿಶನರು ಗುಂಡಿಕ್ಕಿ ಕೊಂದಿರುವರು. ಆದರೂ ಈ ಕಡೆಗಳಲ್ಲಿ ಇನ್ನೂ ಆನೆಗಳ ಹಿಂಡು ಇವೆಯೆಂದೂ, ಶನಿವಾರಸಂತೆ ಪೇಟೆಗಾಗಿ ಆನೆಗಳು ಹೋದದ್ದಿದೆಯೆಂತಲೂ, ಆನೆಗಳ ಕಾಟದಿಂದ ಈ ಭಾಗದ ಜನರಿಗೆ ತುಂಬಾ ತೊಂದರೆಯಾಗಿದೆಯೆಂದೂ, ಇವುಗಳನ್ನು ಇಲ್ಲಿಂದ ಓಡಿಸುವ ಏರ್ಪಾಡು ಮಾಡುವದು ಅಗತ್ಯವಾಗಿದೆಯೆಂದೂ ಕಂಡು ಬಂದಿದೆ.

ಮಡಿಕೇರಿ ವೇದಾಂತ ಮಂದಿರದಲ್ಲಿ ತಾ. 9-9-44ರ ಸಾಯಂಕಾಲ 7 ಗಂಟೆಗೆ 'ಸತ್ಸಂಗ ಫಲ' ಎಂಬುದರ ಬಗ್ಗೆ ಭಾರತದ ಮಹಾ ಕಥೆಯ ಉದಾಹರಣೆ ಕೊಟ್ಟು ಶ್ರೀ ಬಿ. ಕೆ. ಸುಬ್ರಾಯರು ವಾಚನ ಮಾಡುವರು.

ಜೀವನಾವಶ್ಯಕ ಇತರ ವಸ್ತುಗಳ ಕ್ರಯವು ಬಹು ಮಟ್ಟಿಗೆ ಏರಿರುವುದರಿಂದ ಬತ್ತದ ಕ್ರಯವನ್ನು ಕಡಿಮೆ ಪಕ್ಷ ರೂ. 150ಕ್ಕೆ ಏರಿಸಬೇಕೆಂದು ಶ್ರೀ ಎಸ್. ಮೊದಪ್ಪನವರ ಅಧ್ಯಕ್ಷತೆಯಲ್ಲಿ ತಾ. 4ರಲ್ಲಿ ಸೋಮವಾರ ಪೇಟೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಚೀಫ್ ಕಮಿಶನರನ್ನು ಕೇಳಿಕೊಳ್ಳಲಿಕ್ಕೆ ಡೆಪ್ಯುಟೇಶನ್ ಹೋಗಲು ಶ್ರೀ ಹೆಚ್. ಟಿ. ಮುತ್ತಣ್ಣನವರನ್ನು ಆರಿಸಲಾಯಿತು.

ತಾ. 5ರಲ್ಲಿ ಅಮ್ಮತ್ತಿಯಲ್ಲಿ ಶ್ರೀ ನೆಲ್ಲಮಕ್ಕಳ ಆಚ್ಚಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಬಹಿರಂಗ ಸಭೆ ನಡೆದ್ದು ಬತ್ತದ ದರವನ್ನು ಗಾಡಿಗೆ ರೂ. 150 ಕ್ಕಾದರೂ ಏರಿಸಬೇಕೆಂದು ಚೀಫ್ ಕಮಿಶನರನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಿ ಈ ಬಗ್ಗೆ ಡೆಪ್ಯುಟೇಶನ್ ಹೋಗಲು ಶ್ರೀ ಕೆ. ಎಂ. ಕುಶಾಲಪ್ಪನವರನ್ನು ಚುನಾಯಿಸಲಾಯಿತು.

ಕಸ್ತೂರಿ ಬಾ ಸ್ಮಾರಕ ನಿಧಿ.

ಶ್ರೀ ಡಿ. ಭೂಸಪ್ಪನವರು	200
,, ಡಿ. ಚಿಕ್ಕಣ್ಣನವರು	100
,, ಡಿ. ಶಿವಪ್ಪನವರು	100
,, ಎಸ್. ಬಸಪ್ಪನವರು	100
,, ವಿ. ಜಿ. ನಾರಾಯಣಸಾಮಿ ಮೊದಲಿಯಾರವರು	100
,, ಮನೆಯೆಪಂಡ ಎಂ. ತಿಮ್ಮಯ್ಯನವರು	100
,, ಸತ್ಯನಾರಾಯಣ ಹಾಲ್(ವೀರಾಜಪೇಟೆ)	100
,, ಬೇಲೂರುಮಠದ ಜಯಾನಂದಸ್ವಾಮಿಯವರು	50
,, ಬಿ. ಎಂ. ಸಿದ್ದಪ್ಪ ಶೆಟ್ಟಿಯವರು	50
,, ಪಾಲೇಕಂಡ ಭೀಮಯ್ಯನವರು	50
,, ಅಲಮೇಲಮ್ಮನವರು(ಶೇಷಗಿರಿ ತೋಟ)	30
,, ಡಿ. ಎಚ್. ದಾಸಪ್ಪನವರು	30
,, ಪಾಳೇಕಂಡ ಪೂವಯ್ಯನವರು	30
,, ಒಕ್ಕಲಿಗರ ಕಾಳಯ್ಯನವರು	30
,, ಡಿ. ನಾರಾಯಣ ಶೆಟ್ಟಿಯವರು	25
,, ಸಿ. ಚೆನ್ನೀರಪ್ಪನವರು	25
ಮಿಸೆಸ್ ಕೊಂಗೆರ ನಂಜಪ್ಪನವರು	25
,, ನಡಿಕೇರಿಯಂಡ ಸೋಮಯ್ಯನವರು	20
,, ಕೆ. ಎಂ. ಚಂಗಪ್ಪನವರು	20
ಶ್ರೀ ಎಂ. ಸಿದ್ಲಿಂಗಪ್ಪನವರು	20
,, ಎಂ. ಬಿ. ಚೆನ್ನಬಸಪ್ಪನವರು	20
,, ಕಂಡ್ರತಂಡ ಎ. ಚ್ಚಂಗಪ್ಪನವರು	20

ರಣಭೇರಿ.

ಯುದ್ಧವು ಪ್ರಾರಂಭವಾಗಿ ಐದು ವರ್ಷಗಳು ಮುಗಿದವು. ಈ ಐದು ವರ್ಷಗಳ ಅಖಂಡ ಹೋರಾಟದಲ್ಲಿ ನಾಜಿ ನರಮೇಧವು ಜಗತ್ತಿನ ಇತಿಹಾಸದಲ್ಲಿ ಹಿಂದಾದುದು. ಈ ಐದು ವರ್ಷಗಳಿಂದ ಯುದ್ಧಾಸಕ್ತವಾದ ಇಕ್ಕಟುನೂ ನಾನಾರೀತಿಯ ಕಷ್ಟಗಳನ್ನು ಅನುಭವಿಸಿದರು. ಹಿಟ್ಲರನು ಯುದ್ಧದ ಪ್ರಥಮ ವರ್ಷಗಳಲ್ಲಿ ದಿಗ್ವಿಜಯಯಾತ್ರೆಯನ್ನು ಸಾಗಿಸಿ ಇಡೀ ಜಗತ್ತನ್ನು ಅಲ್ಲೋಲಕಲ್ಲೋಲವಾಗಿ ಮಾಡಿದನು. ' ಜರ್ಮನಿಯು ಸರ್ವರಾಷ್ಟ್ರಗಳನ್ನೂ ಬಗ್ಗುಬಡಿದು ವಿಶ್ವವಿಜಯಿಯಾಗಿ ಜಗತ್ತಿನ ಸ್ವಾಮಿಯಾಗುವುದೆಂದು ಹಲವರು ನುಡಿಯತೊಡಗಿದರು. ಹೀಗೆ ಜರ್ಮನಿಯ ಕೀರ್ತಿಪತಾಕೆಯು ಮೇಲೇರಿದಂತೆ ತಮ್ಮ ತಮ್ಮ ಹಿತಸಾಧನೆಗಾಗಿ ಹಲವಾರು ಅಲರಾಷ್ಟ್ರಗಳು ಜರ್ಮನಿಯ ಬಾಲಹಿಡಿಯುವುದನ್ನು ನಡೆಯತೊಡಗಿದವು ಫ್ರಾನ್ಸಿನ ಪೆಟೆನ್ ಮತ್ತು ಲಾವಲರೂ, ಯುಗೊಸ್ಲೇವಿಯೂದ ಶ್ರೀಮಂತ ಜವಿೂನ್ದಾರರು, ಹಂಗೆರಿಯ ಹಾರ್ತಿಯವರು, ರೊಮಿನಿಯೂದ ಎಂಟೊನಿಸ್ಕರು ಹೀಗೆ ಒಬ್ಬೊಬ್ಬರಾಗಿ ಹಿಟ್ಲರನ ಕೈಗೊಂಬೆಗಳಾದರು. ಹಿಟ್ಲರನ ಅತ್ಯಂತ ತೇಜಸ್ಸಿನಿಂದ ವಿಜಯಸೂರ್ಯನ ಪ್ರಭೆಯಿಂದ ಆಕರ್ಷಿತರಾಗಿ ಓಡಿ ನಡೆದವು ಆದರೆ 1939-1944 ಅಲ್ಲ. ಯುದ್ಧದ ಪ್ರಥಮ ವರ್ಷಗಳಲ್ಲಿ ಹಿಟ್ಲರನ ತೋಳ್ಬಲದಿಂದ ಬೆಳಗಿದ ವಿಜಯಜ್ಯೋತಿಯು ಎಣ್ಣೆ ತೀರಿದ ದೀಪದಂತೆ ದಿನೇ ದಿನೇ ಕಳೆಗೆಡತೊಡಗಿದೆ. ಹಿಂದೆ ತನ್ನ ವಿಜಯ ಪ್ರಭೆಗೆ ಮರುಳಾಗಿ ಜೊತೆಸೇರಿದ ರಾಷ್ಟ್ರಗಳು ಒಂದೊಂದಾಗಿ ಹಿಟ್ಲರನನ್ನು ಬಿಡತೊಡಗಿವೆ. ತನ್ನ ಹಿತಕ್ಕಾಗಿ ಸಂದರ್ಭ ಸಾಧಿಸಿ ಗೆದ್ದ ಎತ್ತನ ಬಾಲಹಿಡಿಯುವ ಈ ರಾಷ್ಟ್ರಗಳು ಮಿತ್ರರ ಕಡೆ ಸೇರತೊಡಗಿವೆ. ರೊಮೇನಿಯೂ, ಹಂಗೇರಿ, ಬಲ್ಗೇರಿಯೂ, ಹೀಗೆ ಈ ಸಂಧಿಸಾಧಕರ ಪ್ರಯಾಣ ಮಿತ್ರ ಶಿಬಿರದತ್ತ ನಡೆದಿದೆ. ಫಿನ್ಲೆಂಡೂ ಈ ಯಾತ್ರಿಕರ ಜೊತೆ ಸೇರಲಿದೆ. 'In times of prosperity friends will be in plenty. But in times of adversity not one in twenty' 'ಉತ್ಕರ್ಷದ, ಅಭಿವೃದ್ಧಿಯ ಕಾಲದಲ್ಲಿ ಸ್ನೇಹಿತರು ಮೇಲೇರಿ ಬರುವರು. ಆದರೆ ಸಂಕಷ್ಟ, ಅವನತಿಯ ಕಾಲದಲ್ಲಿ ಯಾರೂ ಇರರು' ಎಂಬ ನಾಣ್ನುಡಿ ಸರಿಯಾಗಿದೆ.

ರಣಕ್ಷೇತ್ರವನ್ನು ಪರಿಶೀಲಿಸಿದರೆ ಅಕ್ಷರಾಷ್ಟ್ರಗಳಿಗೆ ಯಾವ ಭಾಗದಲ್ಲೂ ಜಯಕಂಡುಬರುವದಿಲ್ಲ. ಫ್ರಾನ್ಸಿನಲ್ಲಿ ಮಿತ್ರಸೇನೆಗಳು ವಿಜಯವನ್ನು ಸಂಪಾದಿಸಿ ಮುಂದರಿಯುತ್ತಿವೆ: ಫ್ಯಾರಿಸನ್ನು ವಶಪಡಿಸಿ ಮುಂದೆ ಸಾಗಿದ ದಳಗಳು ಬೆಲ್ಜಿಯಮ್ ದೇಶಕ್ಕೆ ನುಗ್ಗಿ ಎಂಟ್ವರ್ಪನ್ನು ವಶಪಡಿಸಿಕೊಂಡು ಮುಂದೆ ಸಾಗಿವೆ. ಮಿತ್ರದಳಗಳು ಜರ್ಮನಿಯ ಗಡಿಗೆ ಬಂದಿರುವವೆಂದು ಹೇಳಲಾಗುತ್ತಿದೆ. ಈ ಹಿನ್ನಡೆಯ ಬಗ್ಗೆ ಜರ್ಮನ್ ಪ್ರಚಾರ ಮಂತ್ರಿ ಗೇಬಲ್ಸನು ಹೀಗೆ ಹೇಳುತ್ತಾನೆ. 'It is the Fuehrer's plan now to withdraw his faithful and glorious armies behind the unbreakable barrier of the western wall' 'ತನ್ನ ನಂಬಿಗೆಗರ್ಹವಾದ ಮತ್ತು ಖ್ಯಾತಿವೆತ್ತ ಸೇನೆಗಳನ್ನು ಅಭೇದ್ಯವಾದ ಪಶ್ಚಿಮಗೋಡೆಯ ವರೆಗೆ ಹಿಂತೆಗೆಯುವದು ಹಿಟ್ಲರನ ಯೋಜನೆಯಾಗಿದೆ.' ಇದರ ಪ್ರಕಾರ ಜರ್ಮನರು ಹಿಂತೆಗೆದುಕೊಳ್ಳುವದು ಅವರ ಯುದ್ಧ ಯೋಜನೆಗನುಸಾರವಾಗಿ ಎಂದಂತಾಯಿತು. ನಿಜ, ಯುದ್ಧ ಪ್ರಚಾರದ ಒಂದು ಮೂದರಿಯಿದು. ಯೂರೋಪೇ ಸೈನ್ಯವೆ ಸೋತು ಹಿಂದೆ ಬಂದ ವರದಿ ಈ ವರೆಗೆ ಬಂದಿಲ್ಲ ಮಿತ್ರರೇ ಆಗಲೀ ಶತ್ರುಗಳೇ ಆಗಲೀ ಹಿಂದೆ ಬರುವದು ತಮ್ಮ ಯೋಜನೆಗೆ ಅನುಸಾರವಾಗಿ! ಫ್ರಾನ್ಸಿನಲ್ಲಿಯ ನಾಝಿಗಳ ಯುದ್ಧ ಕೃಪುವನ್ನು ನೋಡಿದರೆ ಕೇವಲ ಮಿತ್ರರ ಮುನ್ನಡೆಯನ್ನು ಸಾಧ್ಯವಿದ್ದಷ್ಟು ತಡೆದು ಸಮಯ ಒದಗಿಸಿಕೊಳ್ಳುವಂತೆ ಕಂಡುಬರುತ್ತಿದೆ. ಆದ್ದರಿಂದಲೇ ತಮ್ಮ ಸೈನ್ಯಬಲ ಸ್ವಲ್ಪ ಜೆನ್ನಾಗಿರುವಲ್ಲಿ ಖಾಡಾಖಾಡಿ ಹೋರಾಡುತ್ತಾರೆ. ಇನ್ನುಳಿದಂತೆ ಜರ್ಮನಿಯಲ್ಲಿ ಹಿಂದೆ ಸರಿದು ಜರ್ಮನ್ ಗಡಿಯಲ್ಲಿ ಸಿದ್ಧತೆಮಾಡಿಕೊಳ್ಳುತ್ತಿದ್ದಾರೆ.

ಇತ್ತ ರಷ್ಯವು ಸಹ ಬಹು ಒತ್ತಡದಿಂದ ಜರ್ಮನಿಯ ಮೇಲೆ ಸಾಗಿದೆ. ಇತ್ತ ಪೋಲೆಂಡಿನಲ್ಲಿ ರಷ್ಯಾ ಬ್ರಿಟನ್ನಾಗಳಿಗೆ ಘರ್ಷಣೆ ಬಂದಿದೆ. ಬ್ರಿಟಿಷ್ ಮತ್ತು ಅಮೇರಿಕಾ ಅಧಿಕಾರಿಗಳು ರಷ್ಯಾಕ್ಕೆ ಪತ್ರ ಬರೆದು 'ನಾವು ವಿಮಾನಗಳ ಮೂಲಕ ವಾರ್ಸಾದ ಪೋಲೆಂಡಿನ ಮುಖ್ಯಪಟ್ಟಣ ಜನರಿಗೆ ಆಹಾರ ವಸ್ತುಗಳನ್ನೂ, ಮದ್ದುಗುಂಡುಗಳನ್ನೂ ಒದಗಿಸುತ್ತೇವೆ. ನಮ್ಮ ವಿಮಾನಗಳು ಬಂದು ನಿಲ್ಲಲು ಅವಕಾಶಕೊಡಿ' ಎಂದು ಕೇಳಿದ್ದರು. ರಷ್ಯಾವು ಇದನ್ನು ತಿರಸ್ಕರಿಸಿದೆ. ಬ್ರಿಟನಿನಲ್ಲಿರು ಪೋಲೆಂಡಿನ ಸಮಿತಿಯನ್ನು ರಷ್ಯನರು ಮಾನಿಸಿಲ್ಲ. ರಷ್ಯಾದಲ್ಲಿಯೂ ಪೋಲೆಂಡಿನ ಸಮಿತಿಯೊಂದಿದೆ. ಮಿತ್ರರು ಇಂಗ್ಲೆಂಡಿನಲ್ಲಿರುವ ಪೋಲಿಸ್ ಸಮಿತಿಯ ಸೂಚನೆಯಂತೆ ಪೋಲೆಂಡಿನಲ್ಲಿ ಕಾರ್ಯನಡೆಯಬೇಕೆನ್ನುತ್ತಾರೆ ರಷ್ಯಾದಲ್ಲಿರುವ ಸಮಿತಿಯ ಹೇಳಿಕೆಯಂತೆ ಕಾರ್ಯ ನಡೆಯಬೇಕೆಂದು ರಷ್ಯನರು ಹೇಳುತ್ತಿದ್ದಾರೆ. ಈ ಸಮಸ್ಯೆಯೂ ಉಗ್ರರೂಪ ತಾಳಿದೆ. ಈ ಮಧ್ಯೆ ಜರ್ಮನಿ, ರಷ್ಯಾಗಳೊಳಗೆ ಒಪ್ಪಂದ ಮಾಡಿಸಲು ಜಪಾನು ಬಹು ಪ್ರಯತ್ನ ಮಾಡುತ್ತಿದೆಯೆಂದು ಪರದಿ ಬಂದಿದೆ. ಇದು ಜಯಪ್ರದವಾದರೆ ಜರ್ಮನಿಯ ಭಾಗ್ಯಭಾನು ಉದಯಿಸಿದಂತೆ.

ಜರ್ಮನಿಯು ಈ ರೀತಿ ಅಪಜಯವನ್ನು ಹೊಂದುತ್ತಿರುವ ವರದಿಗಳು ಮೇಲಿಂದ ಮೇಲೆ ಬರುತ್ತಿದ್ದರೂ ಅದರೊಂದಿಗೆ ಲಂಡನ್ನಿನ ಮೇಲೆ ಅವರು ಮಾಡುತ್ತಿರುವ ಧಾಳಿಯ ಪರದಿಗಳೂ ಆಗಾಗ ಬರುತ್ತಿವೆ. ಜರ್ಮನರ ಪ್ರೇತವಿಮಾನಗಳ ಹಾವಳಿ ಎಂದಿನಂತೆ ಇದೆ. ಆದರೆ ಕಳೆದ 60 ಗಂಟೆಗಳಿಂದ ಇಂಗ್ಲೆಂಡಿನ ಮೇಲೆ ಈ ಪ್ರೇತವಿಮಾನಗಳ ಧಾಳಿಯು ನಡೆಯಲಿಲ್ಲವೆಂದು ತಾ. 5ರ ವರದಿಯೊಂದು ತಿಳಿಸುತ್ತದೆ. ತಾ. 3 ಮತ್ತು 4ರಲ್ಲಿ ಫ್ರಾನ್ಸ್ ಕರಾವಳಿಯ ಜರ್ಮನ್ ಮಹಾತೋಪುಗಳು ಇಂಗ್ಲೆಂಡಿನ ಮೇಲೆ ಗುಂಡು ಹಾರಿಸಿದವೆಂದೂ ವರದಿ ಬಂದಿದೆ.

ಜರ್ಮನಿಯು ಪ್ರತಿಭಟಿಸದೆ ಹಿಂತೆಗೆದುಕೊಳ್ಳುತ್ತಿರುವದನ್ನು ಕಂಡು ಜಪಾನಿನಲ್ಲೂ ಸ್ವಲ್ಪ ಶೀತಗಾಳಿ ಬೀಸತೊಡಗಿದೆ. ಮಿತ್ರರು ಜಪಾನಿನ ಮೇಲೆ ದಂಡಯಾತ್ರೆ ಕೈಕೊಳ್ಳಬಹುದೆಂದು ಗಾಬರಿಗೊಂಡು ಅದಕ್ಕೆ ಸರಿಯೂದ ಸಿದ್ಧತೆ ಮಾಡುತ್ತಿದ್ದಾರೆ. ಜಪಾನರು ಹೀಗೆ ಮಂಜಾಗ್ರತೆ ವಹಿಸುತ್ತಿರುವುದರಿಂದ ನಮ್ಮ ಮತ್ತು ಅವರ ಶಕ್ತಿ ಸಾಮರ್ಥ್ಯಪತ್ತಲನೆಯಿಂದ ಅಮೇರಿಕದ ಎಲೀಜರ್ ಎಂಬ ರಾಜನೀತಿ ವಿಶಾರದರು ಜಪಾನನ್ನು ಸೋಲಿಸಲು ಮಿತ್ರ ರಾಷ್ಟ್ರಗಳಿಗೆ ಕಡಿಮೆ ಮೂರು ವರ್ಷಗಳಾದರೂ ಹಿಡಿದೀತು ಎಂದಿರುವರು. ಹೇಗೂ ಜಪಾನು ತನ್ನ ಸರ್ವ ಕ್ಷೇತ್ರಗಳನ್ನು ಸುರಕ್ಷಿತಪಡಿಸಿಕೊಂಡು ರಣರಂಗಕ್ಕಿಳಿದು ಭುಜ ತಟ್ಟಿ ನಿಲ್ಲಲು ಸಿದ್ಧವಾಗುತ್ತಿದೆ.

ಸೇವಾಗ್ರಾಮದಲ್ಲಿ ಪಿಕೆಟಿಂಗ್

ಪಾಕಿಸ್ತಾನ್ ವಿರೋಧ ಪ್ರಚಾರಕ್ಕೆ ಸೇರಿದ ಸ್ವಯಂಸೇವಕರುಗಳೂ ಕಾರ್ಯದರ್ಶಿಯು ಸೇವಾಗ್ರಾಮದ ಆಶ್ರಮದಲ್ಲಿ ಗಾಂಧೀಜಿಯವರ ಗುಡಿಸಿಲಿನ ಮುಂಭಾಗದಲ್ಲಿ ಪಿಕೆಟಿಂಗ್ ನಡೆಸುತ್ತಿದ್ದಾರೆ. ಮಿ ಜಿನ್ನಾರವರನ್ನು ಗಾಂಧೀಜಿಯವರು ಭೇಟಿಮಾಡಕೂಡದೆಂದೂ ಹಾಗಿಲ್ಲದಿದ್ದರೆ ಕೊನೆಪಕ್ಷ ರಾಜಾಜಿಯ ಸಲಹೆಗೆ ಬೆಂಬಲಕೊಡಕೂಡದೆಂದೂ ಈ ರೀತಿ ಪಿಕೆಟಿಂಗ್ ನಡೆಸಿದ್ದಾರೆ.

—೦೦—

(1ನೇ ಪುಟದಿಂದ ಸಾಗಿದ್ದು)

ಲು ಮುಸ್ಲಿಮರಿಗೆ ಪಾಕಿಸ್ತಾನವನ್ನು ಕೊಡುವ ತನ್ನ ಯೋಜನೆಗೆ ಗಾಂಧೀಜಿಯವರ ಬೆಂಬಲ ಪಡೆದು ದೇಶದ ಮುಂದಿಟ್ಟರು. ಈ ಬಗ್ಗೆ ಗಾಂಧೀಜಿ ಮತ್ತು ಜಿನ್ನಾರವರೊಳಗೆ ಈ ತಾ. ೯ ರಲ್ಲಿ ಮಾತುಕತೆಯಾಗಲಿದೆ.

ಈ ಆಂದೋಲನದಲ್ಲಿ ಸತ್ತು ಕೆಟ್ಟವರಿಗೆ ಕಡಿಮೆ ಇಲ್ಲ. ಮಹದೇವ ದೇಸಾಯಿ, ಕೆಸ್ತೂರ್ ಬಾ ಇವರು ಕಾರಾಗೃಹದಲ್ಲಿಯೇ ಮಡಿದವರಲ್ಲಿ ಮುಖ್ಯರು. ಕಾರಾಗೃಹದಿಂದಮ್ಟಾದ ಅಶಕ್ಯತೆಯಿಂದ ಮಡಿದವರಲ್ಲಿ ಆರ್. ಎಸ್. ಪಂಡಿತ್, ಸತ್ಯಮೂರ್ತಿ ಇವರು ಪ್ರಮುಖರು.

— ಶೇಲ ಢಾ —

ಎಂಟಿ ಮಲೇರಿಯಾ ವನಸ್ಪತಿ ಪಿ

ಎಲ್ಲ ತರದ ಜ್ವರ, ಜ್ವರಗಡ್ಡೆ, ತಜ್ಜನ್ಯ ಆಶಕ್ತತೆ ಮೇಲೆ ರಾಮಬಾಣ; ಲಿವರ, ಹೊಟ್ಟೆನೋವು, ಪಿಲಬದ್ಧತೆ, ಸುಧಾರಿಸಿ ಶಕ್ತಿ ಬೆಳೆಸುತ್ತದೆ. ಕ್ವಿನೈನ್ ಬದಲು ವೈದ್ಯ ಡಾಕ್ಟರರು ಇ ಖಾನೆಗಳಲ್ಲಿ ಉಪಯೋಗಿಸುವ 1000 ಗುಳಿಗೆಗಳಿಗೆ ರೂ. 15-0 100ಕ್ಕೆ ರೂ. 1-12-0. ಈ ಔಷಧಿಗಳಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿಟ್ಟವರಿಗೆ ಒಂದು ಸಾವಿರ ರೂ. ಬಹುಮಾನ ಕೊಡಲಾಗುವುದು. ಪ್ರತಿ ಊರಿನಲ್ಲಿ ಮೂರಾಟಕ್ಕೆ ಏಜೆಂಜರು ಬೇಕು.

ಶೇಲಢಾ ಕೆಮಿಕಲ್ ಕಂಪೆನಿ,
ಶಿರಸಿ, ಉತ್ತರ ಕನ್ನಡ

ಸೋಲ್ ಏಜೆಂಟರು—
ಎಸ್. ಎಲ್. (ಅಪ್ಪುರಾವ್) ಢಾಕ
ಬಡವರ ಔಷಧಿ ಸರ್ವಿಸ
ಶಿರಸಿ, ಉತ್ತರ ಕ

ಶ್ರೀ ಚಾರೀರಮುದಣ್ಣನವರು	15
,, ಕೆ. ಮಲ್ಲಪ್ಪನವರು	15
,, ಅಬ್ಬಿಮಠದ ಪುಟ್ಟಪ್ಪನವರು	15
,, ದೇವಪೆಟ್ಟ ಶಕುನಯ್ಯನವರು	10
,, ಕೆ ಚಂದ್ರಶೇಕರಯ್ಯನವರು	10
,, ಮೂಡೆರ ಐಯ್ಯಣ್ಣನವರು	10
ಮಿಸೆಸ್ ಸಿ. ಬಿ. ಕಾರ್ಯಪ್ಪನವರು	10
,, ಐಚಟ್ಟರ ಐಯ್ಯಮ್ಮನವರು	10
,, ಪಾಲೇಕಂಡ ಬಿ. ಚಂಗಪ್ಪನವರು	10
ಶ್ರೀಮತಿ ಪಾಸಕ್ಕನವರು	10
ಶ್ರೀ ಸ್ಟಿ. ವಿ. ನಾರಾಯಣನವರು	10
,, ಮೂನಾಡು ಮಂಜಪ್ಪನವರು	10
,, ಚೀರಂಡ ಪೆಮ್ಮಯ್ಯನವರು	5
,, ನೆಹರು ಕುಟೀರದವರು (ನಟ್ಟೂರು)	5
ಮಿಸೆಸ್ ಡಿ. ನಾರಾಯಣಶೆಟ್ಟಿಯವರು	5
ಶ್ರೀ ಕಾಕಮೂಡ ನಾಣಯ್ಯನವರು	4

ಶ್ರೀಗಳಾದ ಆರ್ ಡಿ ಫೆರ್ನಾಂಡಿಸ್ ಮತ್ತು ಎನ್ ಕೆ ಮೂರ್ತಿ ಇವರುಗಳು ರೂ 2ರಂತೆ

1 ರೂ. ಕೊಟ್ಟವರು.

ಶ್ರೀಗಳಾದ ಎಂ. ಕೆ. ಪದ್ಮನಾಭ, ಕಾಯಪಂಡ ಬೋಳಯ್ಯ, ಕೆ. ಎಲ್. ವೇದಾದ್ರಿ, ಜಿ. ವಿ. ಸುಬ್ಬಮ್ಮಯ್ಯ, ಮಿಸ್ ಆದೇಂಗಡ ದೇವಿ, ಆರಮಣಮೂಡ ಬೆಳ್ಯಪ್ಪ, ಕಾಕನೂಡ ಮುತ್ತು, ರಾಮಚಂದ್ರ ಶರ್ಮ, & ಜೆ. ಆರ್. ಜೋಸೆಫ್ ಇವರುಗಳು. ಈ ವರೆಗೆ ಒಟ್ಟು 9,079 ರೂ. ಜಮೆಯಾಗಿದೆ.

ಧಾತುವೃದ್ಧಿ ರಸಾಯನ [ZANDU]

"ರ್ಯಾಕ್ಟೋ—ಫಾಸ್‌ಫೋ—ಮೊಲ್ಟ್"

ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ

ಈ ರಸಾಯನ } ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಆಶಕ್ತರಿಗೆ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯೂಗಿರುವುದು. ಇದರಲ್ಲಿ ಸಂಜೀವನಕರವಾದ ಎಲ್ಲಾ ನಿಷ ಮಿನ್ನುಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ.

ಇದರಲ್ಲಿ ಇಲೆಕ್ಟರ್ ಫಾಸ್‌ಫೋಮೊಲ್ಟ್, ಹೆಮೋಗ್ಲೋಬಿನ್, ಸೋದಿಗ್ಲಿಸರೊ ಫಾಸ್ ಫೇಟ್ ಪೆಪ್ಸಿನ್, ಸಾಲ್, ಮೊಲ್ಟ್ ಎಕ್ಸ್‌ಟ್ರಾಕ್ಟ್, ದಾಕ್ಷಾಸವ ಮೊದಲಾದ ಪ್ರಸಿದ್ಧ ಔಷಧಿಗಳಿಂಶ ವಿದೆ. ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧ ಷಾಪುಗಳಲ್ಲಿವೆ.

ಝುಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,
ಗೋಖಲೆ ರೋಡ್, ಬೋಂಬೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

39) **ಸ್ಥಾಪನೆ:—೧೮೯೭.**

೪೭ನೇ ವಾರ್ಷಿಕ ವರದಿಯಲ್ಲಿನ ಕೆಲಪ್ರಮುಖ ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	೯೭,೩೭,೦೦೦ ರೂ. ಮೀರಿದೆ
	ಚಾಲ್ತಿಯಿರುವ ವಿಮೆ	೧೬,೪೯,೮೮,೦೦೦ ,, ,,
	ಆಸ್ತಿ	೬,೩೦,೪೬,೦೦೦ ,, ,,
ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು		೮,೩೮,೦೦,೦೦೦ ,, ,,

ಶಾಖಾ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು.

ಏಜೆನ್ಸಿ ಆರ್ಜಿಗಳನ್ನು ಸ್ವಾಗತಿಸಿದೆ.

ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್ ಬೊಂಬಾಯಿ

"ಟ್ರಾಪಿಕಲ್"

ಕಂಪೆನಿಯಲ್ಲಿ ವಿಮೆ ಮಾಡುವದೇ ಯೋಗ್ಯವೆಂದು ನಿಮ್ಮ 1944 ರ ತೀರ್ಮಾನವಾಗಲಿ

1943ರಲ್ಲಿ ಮಾಡಿದ ವಿಮಾ ಮೌಲ್ಯ ರೂ. 91,99,125.

ಹಿಂದೂದೇಶದ ಹಿರಿದಾದ ರಾಷ್ಟ್ರೀಯ ಕಂಪೆನಿ.

ಮುಖ್ಯ ಖಜೇರಿ: ಹೊಸ ದಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ತಿಗೆ ಬರೆಯಿರಿ:—

ಯಂ. ಯು. ಅಚ್ಚಣ್ಣ, ಮಡಿಕೇರಿ. } ಅಥವಾ { ಯಂ. ರಂಗನಾಥಶೆಟ್ಟ ಬ್ರಾಂಚ್ ಮೇನೇಜರ್, ಮಂಗಳೂರು.

34)

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿ., ಮಡಿಕೇರಿ

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರ್ ಮೊಬಲಗು 95,060, ಜನೂಬಂದ ಠೇವಣಾತಿ 2,24,755, ವಸೂಲಾದ ಕ್ಷೇಮನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಠೇವಣಾತಿಗಳಿಗೆ 1 ವರ್ಷದಿಂದ 3 ವರ್ಷಗಳ ವರೆಗೆ ಶೇಕಡ 2. 3 ವರ್ಷಗಳಿಂದ 5 ವರ್ಷಗಳ ವರೆಗೆ 2½. 5 ವರ್ಷಗಳಿಂದ 10 ವರ್ಷಗಳ ವರೆಗೆ 3½ 10 ಮತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇ 0–8–0.

ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

ಬಂಗಾಳ ಬರಗಾಲ.

ಬಂಗಾಳದಲ್ಲಾಡ ಅತ್ಯಂತ ಭಯಂಕರ ಬರಗಾಲದ ಸಹಾಯಕ್ಕಾಗಿ ಹಿಂದೂದೇಶದ ಉದ್ದಗಲಕ್ಕೂ ಧನ, ಧಾನ್ಯ ಸಂಗ್ರಹಿಸಿ ಬರಗಾಲ ಪೀಡಿತರಿಗೆ ಸಹಾಯಮಾಡಲಾಯಿತು. ಕೊಡಗು ನಾಡಿನ ಮಾನ್ಯಮಹನೀಯರೂ ಸಹ ಸುಮಾರು 3000 ದ ವರೆಗೆ ಧನ ಸಹಾಯ ಮಾಡಿದರು. ಬರಗಾಲ ಪೀಡಿತರಿಗೆ ಸಹಾಯಮಾಡಲು ನೇಮಕವಾದ ಸಮಿತಿಯವರು ಅವರ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ಕಳುಹಿಸಿರುವರು. ಪಾಠಕರ ಅನುಗಾಪನೆಗೆ ಅದರ ಕೆಲವು ಪ್ರಾಮುಖ್ಯ ಭಾಗಗಳನ್ನು ಇವರಡಿ ಕೊಡಲಾಗಿದೆ.

"ಇಡೀ ಹಿಂದೂದೇಶದವರ ಹೃದಯವನ್ನು ತಳಮಳಗುಟ್ಟಿಸಿ, ಮಿಲಿಯಂತರ ಜನರನ್ನು ಸೂರೆಗೊಂಡ ಬಂಗಾಳ ಬರಗಾಲವು ಹಿಂದೂದೇಶದ ಚರಿತ್ರೆಯಲ್ಲಿ ಹಿರಿದಾದುದು. ಜನರು ನಿರ್ಗತಿಕರಾಗಿ, ನಿಶ್ಚೇಷ್ಟಿತರಾಗಿ, ನಿರ್ವೀರ್ಯರಾಗಿ, ಮಾನವತೆಯನ್ನು ಕಳಕೊಂಡು, ನೈತಿಕ, ಬಲ ಕುಗ್ಗಿದವರಾಗಿ, ಬಳಲಿ ಕಂಗೆಟ್ಟರು. ತುತ್ತು ಅನ್ನಕ್ಕಾಗಿ ಬೀದಿ ಬೀದಿ ಅಲೆದು ಪ್ರಾಣಬಿಟ್ಟರು. ನಾಯಿನರಿಗಳೊಡನೆ ಸೆಣಸಿ ಜೀವತ್ಯಾಗಮಾಡಿದರು. ಮಕ್ಕಳು ಮರಿಗಳನ್ನು, ಹೆಂಡತಿ, ಬಳಗದವರನ್ನು ಮೂರಿದರು, ತಮ್ಮ ಸರ್ವಸ್ವವನ್ನೂ ಬರಗಾಲಕ್ಕೆ ಬಲಿಕೊಟ್ಟರು. ಸರಿಯಾದ ಆಹಾರವಿಲ್ಲದೆ ಜನರು ನಾನಾರೀತಿಯ ರೋಗಗಳಿಗೆ ತುತ್ತಾಗಿ ಕೇಳುವವರಿಲ್ಲದೆ ನೊಣಗಳಂತೆ ಸತ್ತರು. ಈ ಬರಗಾಲದಿಂದ 6,98,000 ಜನರು ಸತ್ತರೆಂದು ಭಾರತ ಸೆಕ್ರೆಟರಿಗಳಾದ ಎಮರಿಯವರು ಹೇಳಿದರು. ಆದರೆ ಇದು ತಪ್ಪು ಸಂಖ್ಯೆ. ಇನ್ನೂ ಸರಿಯಾದ ಸಂಖ್ಯೆಯು ತಿಳಿದು ಬರದಿದ್ದರೂ ಕಲ್ಕತ್ತ ವಿಶ್ವವಿದ್ಯಾಲಯದವರು ಜಮಾಯಿಸಿದ ಸಂಖ್ಯೆಯಂತೆ 35,00,000 ಜನರು ಸತ್ತಿರುವರೆನ್ನಬಹುದು.

ಬರಗಾಲದ ನಂತರ ಬಂಗಾಳದಲ್ಲಿ ಉಳಿದಿರುವ ಜನರ ಸ್ಥಿತಿಗತಿಇನ್ನೂ ಶೋಚನೀಯವಾಗಿದೆ. ತಮಗೆ ಬೇಕಾದ ಆಹಾರವನ್ನು ಕೊಂಡುಕೊಳ್ಳಲು ಶಕ್ತಿಯಿಲ್ಲ. ಪೇಟೆಯಲ್ಲಿ ಎಷ್ಟೇ ಅಗ್ಗವಾಗಿ ಧಾನ್ಯವಿದ್ದರೂ ಬಿಡಿಕಾಸಿಲ್ಲದ ಈ ಜನರು ಮಾಡುವದೇನು? ಅವರಿಗೆ ಸಂಪಾದನೆಯ ಮಾರ್ಗತೋರಿಸಿ ಜೀವನ ನಡೆಸುವಂತೆ ಮಾಡುವದು ಸಾರ್ವಜನಿಕರ ಮೇಲೆ ಬಿದ್ದ ದೊಡ್ಡ ಜವಾಬ್ದಾರಿ. ಈ ಬಂಗಾಳ ಸಹಾಯಕ ಸಮಿತಿಯ ಅಧ್ಯಕ್ಷರಾಗಿ ಸರ್. ಬದ್ರಿದಾಸ್ ಗೋಯಂಕರವರಿದ್ದಾರು. ಶ್ರೀ ಶ್ಯಾಮಪ್ರಸಾದ ಮುಖರ್ಜಿಯವರು ಉಪಾಧ್ಯಕ್ಷರಾಗಿದ್ದಾರೆ. ಈ ಸಮಿತಿಯಲ್ಲಿ 17 ಜನ ಸದಸ್ಯರಿದ್ದಾರೆ. ಈ ಸಮಿತಿಯು ಬರಗಾಲಪೀಡಿತರಿಗಾಗಿ ಹಲವು ರೀತಿಯ ಸಹಾಯಮಾಡಿತು. ಹೀಗೆ ಸಹಾಯಮಾಡಲು ಸಾರ್ವಜನಿಕರು ಕೊಡುಗೈಯಿಂದ ಕೊಟ್ಟ ಧನ, ಧಾನ್ಯ ಸಹಾಯವೇ ಕಾರಣ. ಈ ಸಮಿತಿಗೆ ಸಾರ್ವಜನಿಕರಿಂದ ಧನದ ರೂಪವಾಗಿ ರೂ. 27,54,502—3—7 ಬಂತು. ಸುಮಾರು 10 ಲಕ್ಷ ರೂಪಾಯಿಗಳ ಬೆಲೆಯ ಧಾನ್ಯಗಳು ಬಂದವು. ಹೀಗೆ ಒಟ್ಟು ರೂ. 37,೫೦,000 ರೂಪಾಯಿಗೆಳಷ್ಟು ಹಣ ಈ ಸಮಿತಿಯ ವಶಕ್ಕೆ ಬಂತು. ಈ ಹಣದಿಂದ ಈ ಸಮಿತಿಯು 92 ಛತ್ರಗಳನ್ನಿಟ್ಟು 37,850 ಜನರಿಗೆ ಅನ್ನದಾನ ಮಾಡಿತು. 305 ಧರ್ಮಾರ್ಥ ಧಾನ್ಯಕೊಡುವ ಅಂಗಡಿಗಳನ್ನು ತೆರೆದು 79796 ಜನರಿಗೆ ಸಹಾಯಮಾಡಿತು. ಕಮ್ಮಿಕ್ರಯದಲ್ಲಿ ಸಾಮಾನು ಒದಗಿಸುವ 398 ಅಂಗಡಿಗಳನ್ನು ತೆರೆದು 307696 ಜನರಿಗೆ ಸಹಾಯಮಾಡಿತು. ಒಟ್ಟಾರೆ ಈ ಸಮಿತಿಯ 4,೫೫,345 ಜನರ ಸೇವೆ ಮಾಡಿದೆ. ಇದು ದಿನವಹಿ ಈ ಸಮಿತಿಯಿಂದ ಸಹಾಯಪಡೆಯುತ್ತಿದ್ದ ಜನರ ಸಂಖ್ಯೆ.

ವೈದ್ಯಕೀಯ ಸಹಾಯಕ್ಕಾಗಿ 1,45,441.13.0 ಖರ್ಚು ಮಾಡಲಾಯಿತು. ಪೌಂಡಿಗೆ ರೂ. 37 ರಂತೆ ರೂ. 55,೫00 ಯ ಕ್ವಿನೆನ್ನು ಬಂಗಾಳ ಸರಕಾರದಿಂದ ಪಡೆಯಿತು. ಡಾ. ಬಿ. ಸಿ. ರಾಯ್‌ರವರು ಈ ಕ್ವಿನಿನ್‌ನಿಂದ ಬಂದು ರೀತಿಯ ಮಲೇರಿಯಾ ಗುಳಿಗೆಗಳನ್ನು ಮಾಡಿ ಇದರಿಂದ 3 ಲಕ್ಷ ಜನರ ಮಲೇರಿಯಾ ನಿವಾರಣೆ ಮಾಡುವದು ಸಾಧ್ಯವಾಯಿತು. ಈ ಸಮಿತಿಯು 22 ಜಿಲ್ಲೆಗಳಲ್ಲಿ 122 ಕೇಂದ್ರಗಳನ್ನು ತೆರೆದು 64 ಡಾಕ್ಟರುಗಳ 294 ವಾಲಂಟಿಯರುಗಳ ಸಹಾಯ ಪಡೆದು ಜನರಿಗೆ ಸಹಾಯಕೊಟ್ಟತು.

ಇಷ್ಟೆಲ್ಲಾ ಕೆಲಸ ಮಾಡಲು ಅವಕಾಶಮಾಡಿಕೊಟ್ಟವರು ನಮಗೆ ಧನ ಕಳುಹಿಸಿ ಬೆಂಬಲಕೊಟ್ಟ ಮಹನೀಯರು. ಈ ಮಹನೀಯರಿಗೆ ಸಮಿತಿಯ ಪರವಾಗಿ ವಂದನೆಗಳನ್ನು ಅರ್ಪಿಸುವೆವು. ಹೃದಯಕರಗಿ, ಬಂಗಾಲದ ಬವಣೆಯಿಂದ ಮನನೊಂದು ಧನ ಸಹಾಯಮಾಡಿದ ಈ ಮಹನೀಯರು ನಮ್ಮ ವಂದನೆಗಳ ಅಪೇಕ್ಷೆಯಲ್ಲಿಲ್ಲವೆಂಬುದು ನಮಗೆ ಗೊತ್ತು ಆದರೆ ತಮ್ಮ ಉದಾರ ಹಸ್ತದಿಂದ ಸಹಾಯವಿತ್ತು ಅನೇಕ ಜೀವಗಳನ್ನು ಉಳಿಸಲು ಸಹಾಯಕರಾದ ಮಾನ್ಯರಿಗೆ ವಂದನೆಗಳನ್ನು ಅರ್ಪಿಸುವದು ನಮ್ಮ ಕರ್ತವ್ಯ.

ಪ್ರಜೆಗಳ ಅಭಿಪ್ರಾಯವೇ ಕೊನೆಯದು.

ಗಾಂಧೀಜಿಯೂ ಮಿ ಜಿನ್ನಾರವರೂ ಒಂದು ಒಪ್ಪಂದಕ್ಕೆ ಬಂದದ್ದೇ ಆದರೆ ಮೊದಲು ಅದನ್ನು ಭಾರತದ ಪ್ರಜೆಗಳ ಮುಂದಿಟ್ಟು ಅವರೆಲ್ಲರ ಬಹುಮತದ ಬೆಂಬಲ ಪಡೆಯುವುದಕ್ಕೆ ಅವ್ವರು ಯತ್ನಿಸುವರು ಎಂದು ಶ್ರೀ ಸಿ ರಾಜಗೋಪಾಲಾಚಾರಿಯವರು ತಾ 31ರ ಸಂಜೆ ಒಂದು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ ತಿಳಿಸಿದ್ದರು

"ಅಂತಹ ಪ್ರಬಲ ಮುಖಂಡರುಗಳೂ ಕೂಡ ಎಷ್ಟೋ ವಿರೋಧಗಳನ್ನು ಎದುರಿಸಬೇಕಾಗುವುದು ಆ ವಿರೋಧಗಳನ್ನೆಲ್ಲಾ ಎದುರಿಸಿ ಆಪೆರೇಶನ್ ಕೆಲಸ ಮಾಡಬೇಕಾಗಿದೆ ಮುಸ್ಲಿಮರು ಇಂಡಿಯಾದಲ್ಲಿ ಅಲ್ಪ ಸಂಖ್ಯಾತರೆಂದು ಪರಿಗಣಿಲ್ಪಟ್ಟರೂ ಕೂಡ ಅವರ ಸಂಖ್ಯೆ ಜರ್ಮನಿಯ ಪ್ರಜಾ ವರ್ಗದ ಸಂಖ್ಯೆಗಿಂಥಾ ಅಧಿಕವಾಗಿದೆ ಆದ್ದರಿಂದ ನಾನೀಗ ಬಿಡಿಸಬೇಕಾಗಿರುವ ಸಮಸ್ಯೆವು ಕಠಿಣವೆಂದ್ದಾಗಿದೆ" ಎಂದು ರಾಜಾಜಿಯವು ನುಡಿದರು

ಹಿಂದೂಗಳು ಭಾರತದ ಮುಸ್ಲಿಮರಲ್ಲಿ ಭಯ ನಂಬಿಕೆಯಿಡಕೂಡದೆಂದೂ ಅವರ ಶಕ್ತಿಯನ್ನು ತೀರಾ ಅಧಿಕವಾಗಿ ಪರಿಗಣಿಸಕೂಡ್ದೆಂದೂ ರಾಜಾಜಿ ಹಿಂದೂಗಳನ್ನು ಪ್ರಾರ್ಥಿಸಿದರು

—oo—

ಮಹದೇವರಂತೆ ದೇಶಸೇವೆ ಮಾಡಿ.

ಅಲಹಾಬಾದ್ ವಿದ್ಯಾರ್ಥಿಗಳು ಸಂಘದ ಆಶ್ರಯದಲ್ಲಿ ನಡೆದ ಸಭೆಯಲ್ಲಿ ಡಾ. ಕೆ. ವೆಂಕ್. ಕಟಜ್ಜಿರವರು ಮಹದೇವ ದೇಸಾಯಿಯವರ ಜೀವನ ಚರಿತ್ರೆಯ ಮಹತ್ವವನ್ನು ಕುರಿತು ಅನೋಘವಾದ ಭಾಷಣವನ್ನು ನೂಡಿದರು. "ದಿವಂಗತ ಮಹದೇವ ದೇಸಾಯಿಯವರು ಮಹಾತ್ಮ ಗಾಂಧಿಯವರಿಗೆ ಶ್ರೇಷ್ಟರಾದ ಮಹಾ ಶಿಷ್ಯರಾಗಿದ್ದರು. "ಗುರುವನ್ನು ಸಹಜವಾಗಿ ಪ್ರತಿಬಿಂಬಿಸುವ ದೊಡ್ಡ ಶಿಷ್ಯರು. ಮಹದೇವ ದೇಸಾಯಿಯವರು ಮಹಾ ವಿದ್ವಾಂಸರೂ, ಸುಸ್ಪಷ್ಟಿದ್ದ ಪತ್ರಿಕೋದ್ಯೋಗಿಯೂ ಆಗಿದ್ದರು. ಭಾರತದ ಚರಿತ್ರೆಯಲ್ಲಿ ಅವರ ಹೆಸರು ಸ್ಥಿರವಾಗಿ ನಿಲ್ಲುವುದು. ಪಂಡಿತ ಜವಾಹಿರಲಾಲ ನೆಹರೂರವರು ಈ ಸಭೆಯಲ್ಲಿ ಇದ್ದಿದ್ದರೆ ಅವರು ದಿವಂಗತ ದೇಸಾಯಿಯವರ ಬಗ್ಗೆ ಹೆಚ್ಚಿನ ವಿಷಯಗಳನ್ನು ತಿಳಿಸುತ್ತಿದ್ದರು. ಪಂಡಿತ ನೆಹರುರವರು ದಿವಂಗತ ದೇಸಾಯಿಯವರಿಗೆ ಸಹೋದರರಂತೆ ಇದ್ದರು. ವಿದ್ಯಾರ್ಥಿಗಳು ಮಹದೇವಭಾಯಿಯಂತೆ ದೇಶಸೇವೆ ಮಾಡಬೇಕು ಮಹದೇವ ಭಾಯಿಯವರು ತಮ್ಮ ಗುರುವಾದ ಮಹಾತ್ಮಾ ಗಾಂಧಿಯವರ ಸೇವೆಯನ್ನು ಕೊನೆಯ ವರೆಗೂ ತ್ರಿಕರಣಪೂರ್ವಕವಾಗಿ ನೆರವೇರಿಸಿ ಅವರ ಸನ್ನಿಧಿಯಲ್ಲಿಯೇ ಪರಧಾಮವನ್ನೈದಿದರು" ಎಂದು ಶ್ರೀ ಕಟ್ಜುರವರು ನುಡಿದರು

—oo—